ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಫೆಬ್ರವರಿ 2025 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 05
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | February 2025 | Monthly




## ಶಿಕ್ಷಣ - ಪರಿವರ್ತನೆಯ ಸಾಧನ
### ಪುಸ್ತಕ ಬಿಡುಗಡೆ






A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಮಾಘ ಮಾಸದ ಶುಕ್ಲಪಕ್ಷದ ಸಪ್ತಮಿಯ ದಿನವನ್ನು ರಥಸಪ್ತಮಿ ಎಂದು ಆಚರಣೆ ಮಾಡುತ್ತೇವೆ. ಈ ದಿನ ಸೂರ್ಯದೇವನು ಸಪ್ತಕುದುರೆಗಳ ರಥವನ್ನು ಏರುವ ಸುದಿನ. ಸಕಲ ಚರಾಚರ ಜೀವಿಗಳಿಗೆ ಸೂರ್ಯನ ಬೆಳಕು ಅವಶ್ಯ. ವೈಜ್ಞಾನಿಕವಾಗಿ ಹೇಳುವುದಾದರೆ ಸೂರ್ಯನ ಬೆಳಕು 'ಡಿ' ಜೀವಸತ್ವವನ್ನು ನೀಡುವುದು. ರೈತರು ಉತ್ತಮ ಫಸಲಿಗಾಗಿ ಸೂರ್ಯದೇವನನ್ನು ಆರಾಧಿಸುವ ದಿನವೂ ಆಗಿದೆ. ಸೂರ್ಯ ನಮಸ್ಕಾರವೂ ನಮ್ಮ ಆರೋಗ್ಯ ಮತ್ತು ಸಮೃದ್ಧಿಯ ಸಂಕೇತವೂ ಕೂಡ ಅಲ್ಲವೆ?

144 ವರ್ಷಗಳಿಗೊಮ್ಮೆ ಪ್ರಯಾಗರಾಜ್‌ನಲ್ಲಿ ಜರಗುತ್ತಿರುವ ಮಹಾ ಕುಂಭಮೇಳವು ಅತ್ಯಂತ ವೈಶಿಷ್ಟ್ಯಪೂರ್ಣವಾದುದು. ಭಕ್ತರು ಸಾಗರೋಪಾದಿಯಲ್ಲಿ ಸಾಗುತ್ತಿರುವುದು, ತ್ರಿವೇಣಿ ಸಂಗಮದಲ್ಲಿ ಸ್ನಾನ, ಭಕ್ತಿಯ ಪರಾಕಾಷ್ಠೆ ನಾಸ್ತಿಕರಲ್ಲೂ ಆಸ್ತಿಕತೆಯನ್ನು ಮೂಡಿಸುವಂತಹ ಕ್ಷಣಗಳನ್ನು ದೃಶ್ಯ ಮಾಧ್ಯಮಗಳಲ್ಲಿ ನೀವೆಲ್ಲರೂ ಕಂಡಿರಬಹುದು. ಸಾಧ್ಯವಾದರೆ ಸ್ವತಃ ಅಲ್ಲಿಗೆ ಹೋಗಿ ಸುಂದರ ಕ್ಷಣಗಳನ್ನು ಆಸ್ವಾದಿಸಬಹುದಲ್ಲವೇ?

ವೀರಮಾತಾ ಜೀಜಾಬಾಯಿಯ ಮಗನಾದ ಶಿವಾಜಿ ಮಹಾರಾಜನು ಮೊಗಲರನ್ನು ಹಿಂದೂಸ್ತಾನದಿಂದ ಓಡಿಸಬೇಕೆಂಬ ಪ್ರಬಲ ಇಚ್ಛಾಶಕ್ತಿಯನ್ನು ಹೊಂದಿದ ಅಪ್ರತಿಮ ಹೋರಾಟಗಾರ. ಶಿವಾಜಿಯ ಶೌರ್ಯ, ಸಾಹಸ ಪ್ರವೃತ್ತಿಯು ರಾಷ್ಟ್ರಭಕ್ತರಿಗೆ ಮಾದರಿ. ಔರಂಗಜೇಬನು ಶಿವಾಜಿಯನ್ನು ಸೆರೆಹಿಡಿಯಲು ಸಾಕಷ್ಟು ಪ್ರಯತ್ನ ಪಟ್ಟು. ಯಶಸ್ವಿಯಾಗಿದ್ದ. ಆದರೆ ಶಿವಾಜಿ ತನ್ನ ಚಾಣಾಕ್ಷ ಬುದ್ಧಿಯಿಂದ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದು ಅವನ ವಿರುದ್ಧ ಹೋರಾಟ ಮಾಡಿ ಜಯಶಾಲಿಯಾದನು. ಈ ದಿಟ್ಟ ಹೋರಾಟಗಾರನನ್ನು ಫೆಬ್ರವರಿ 19ರ ಅವರ ಜನ್ಮದಿನದಂದು ನೆನಪಿಸಿಕೊಳ್ಳೋಣ. ಇಂತಹ ವೀರಪುರುಷನ ಹೋರಾಟದ ಕಥೆಗಳನ್ನು ಹಾಗೂ ಇತರ ದೇಶಭಕ್ತರನ್ನು ಪರಿಚಯಿಸುವ ಕಥೆಗಳನ್ನು ನಮ್ಮ ವಿದ್ಯಾರ್ಥಿಗಳಿಗೆಲ್ಲ ತಿಳಿಸಿ, ದೇಶಭಕ್ತರಾಗಿ ರೂಪಿಸುವುದರಲ್ಲಿ ನಮ್ಮ ಶಿಕ್ಷಕರ ಪಾತ್ರ ಬಹುಮುಖ್ಯವಾಗಿದೆ.

ಶಿವನಿಗೆ ಅತ್ಯಂತ ಪ್ರಿಯವಾದ ದಿನವೇ ಮಹಾಶಿವರಾತ್ರಿ. ಅಂದು ಈಶ್ವರನನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿದರೆ, ಅವರ ಪಾಪ ಕರ್ಮಗಳೆಲ್ಲ ಪರಿಹಾರವಾಗುತ್ತವೆ ಎಂಬುದು ಎಲ್ಲಾ ಹಿಂದುಗಳ ನಂಬಿಕೆ. ಅಂದು ಶಿವಭಕ್ತರು ಅಭಿಷೇಕಾದಿ ಪೂಜೆ, ಉಪವಾಸ, ಜಾಗರಣೆಯ ನಿಯಮಗಳನ್ನು ಪಾಲಿಸಿದರೆ ಇಷ್ಟಾರ್ಥ ಪ್ರಾಪ್ತಿಯಾಗುತ್ತದೆ ಹಾಗೂ ನಿಮ್ಮ ಮನೆ, ಮನ ಪವಿತ್ರವಾಗುತ್ತದೆ.

ಸರ್ ಸಿ.ವಿ ರಾಮನ್‌ರ ಜನ್ಮದಿನ ಫೆಬ್ರವರಿ 28, ಅಂದು ರಾಷ್ಟ್ರೀಯ ವಿಜ್ಞಾನ ದಿನವನ್ನು ಇಡೀ ದೇಶದಾದ್ಯಂತ ಆಚರಣೆ ಮಾಡಲಾಗುತ್ತದೆ. ನಮ್ಮ ಭಾರತ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಪ್ರತಿಮ ಸಾಧನೆಯನ್ನು ಮಾಡಿದೆ, ಮಾಡುತ್ತಿದೆ. ಇದಕ್ಕೆ ಕಾರಣೀಭೂತರಾದ ನಮ್ಮ ವಿಜ್ಞಾನಿಗಳಿಗೆ ಶತಶತ ಪ್ರಣಾಮಗಳು. ಮುಂದಿನ ನಮ್ಮ ನವಭಾರತದ ವಿಜ್ಞಾನಿಗಳನ್ನು ರೂಪಿಸುವ ಹೊಣೆಗಾರಿಕೆಯು ನಮ್ಮೆಲ್ಲ ಶಿಕ್ಷಕರ ಮೇಲಿದೆ. ಇದನ್ನು ಪೂರೈಸುವುದರಲ್ಲಿ ನಮ್ಮ ಪ್ರಯತ್ನ ನಿರಂತರವಾಗಿರಲಿ, ನಮ್ಮೆಲ್ಲ ಓದುಗರಿಗೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಶುಭಾಷಯಗಳು.

ಎಲ್ಲ ಶಿಕ್ಷಕ ಬಂಧುಗಳು ನಿಮ್ಮೆಲ್ಲ ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಸನ್ನದ್ಧ ಮಾಡುತ್ತಿರುವಿರಿ. ಆ ಪ್ರಯತ್ನದಲ್ಲಿ ನಿಮ್ಮ ವಿದ್ಯಾರ್ಥಿಗಳು ಹಾಗೂ ನೀವು ಯಶಸ್ವಿಯಾಗಲಿ ಎಂದು ಮಾಧ್ಯಮಿಕ ಶಿಕ್ಷಕ ಸಂಘವು ಶುಭವನ್ನು ಹಾರೈಸುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ರಾಷ್ಟ್ರೀಯ ವಿಜ್ಞಾನ ದಿನಾಚರಣೆ – ಶಶಾಂಕ ಎಸ್.ಕುಲಕರ್ಣಿ 3
- ಬೀದರ್ ಜಿಲ್ಲೆಯ ಮಾಧ್ಯಮಿಕ ಶಿಕ್ಷಕ ಸಂಘದ ವಿವಿಧ ಪದಾಧಿಕಾರಿಗಳ ಆಯ್ಕೆ 4
- ರಥಸಪ್ತಮಿ – ಡಾ|| ಲೋಕೇಶ್ 5
- ವೀರರಾಣಿ ಕಿತ್ತೂರು ಚೆನ್ನಮ್ಮ – ಲಕ್ಷ್ಮೀಸಿಂಗ್ ಬಿ. 6
- ಪೂರ್ವಸೂರಿಗಳೊಡನೆ ಅಂಕಣದಲ್ಲಿ 3 – ನಂ. ನಾಗಲಕ್ಷ್ಮಿ 7
- 'ಶಿಕ್ಷಣ ಪರಿವರ್ತನೆಯ ಸಾಧನ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ 9
- ಚಿತ್ರಸುದ್ದಿ 11–12



“ಶಿಕ್ಷಣ – ಪರಿವರ್ತನಾ ಸಾಧನ” ಪುಸ್ತಕ ಬಿಡುಗಡೆ ಕಾರ್ಯಕ್ರಮ

# ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಸಂಕಲ್ಪ ದಿನ















ಕಲಾಸಿಂಚನ ಕಾರ್ಯಕ್ರಮ (ಕೆ. ಎಸ್. ವಿ. ಇಂಟರ್‌ನ್ಯಾಷನಲ್ ಸ್ಕೂಲ್ ಆನಗೊಂಡನಹಳ್ಳಿ, ಬೆಂಗಳೂರು)



MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-02-2025 Date of Posting 20th or 21st of every month Posted at Periodical Rate

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗದಿಂದ ಮನವಿ

ದಿನಾಂಕ 3/1/2025 ಶುಕ್ರವಾರ ದಂದು ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಧಾರವಾಡ ಇವರನ್ನು ಭೇಟಿ ಮಾಡಿ 2024–25 ನೇ ಸಾಲಿನ ಎಸ್ ಎಸ್ ಎಲ್ ಸಿ ಪೂರ್ವಭಾವಿ ಪರೀಕ್ಷೆಯನ್ನು ಪ್ರತಿದಿನ ಒಂದು ವಿಷಯದ ಪರೀಕ್ಷೆ ತೆಗೆದುಕೊಳ್ಳುವಂತೆ ಮನವಿ ಮಾಡಲಾಗಿತ್ತು. ಸಂಜೆ ಒಳಗಾಗಿ ಅಪರ ಆಯುಕ್ತರು ಆದೇಶ ಬದಲಾವಣೆ ಮಾಡಿ ವಿದ್ಯಾರ್ಥಿ ಸ್ನೇಹಿ "ಪರೀಕ್ಷಾ ವೇಳಾ ಪಟ್ಟಿ"ಆದೇಶ ಹೊರಡಿಸಿದ್ದಾರೆ. ಮಾನ್ಯ ಶ್ರೀ ಜಯಶ್ರೀ ಶಿಂತ್ರಿ, ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಧಾರವಾಡ ಇವರಿಗೆ ಮಾಧ್ಯಮಿಕ ಶಿಕ್ಷಕ ಸಂಘ ವತಿಯಿಂದ ಅಭಿನಂದನೆಗಳು. ಈ ನಿಯೋಗದಲ್ಲಿ ಅಧ್ಯಕ್ಷರಾದ ಸಂದೀಪ ಬೂದಿಹಾಳ, ರಾಜ್ಯ ಕಾರ್ಯದರ್ಶಿ ಶ್ರೀಧರ ಪಾಟೀಲ ಕುಲಕರ್ಣಿ, ಉಪನ್ಯಾಸಕರಾದ ಸುಭಾಷ್ ಮಾಸ್ಗೋಣಿ ಭಾಗವಹಿಸಿದ್ದರು.





23/01/2025 ರಂದು ಕರ್ತವ್ಯಭೋಧ ದಿನದ ಕಾರ್ಯಕ್ರಮ ರಾಷ್ಟ್ರೋತ್ಥಾನ ಪ್ರೌಢಶಾಲೆ ಹಾಗೂ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಆಶ್ರಯದಲ್ಲಿ ನಡೆಯಿತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಸಹಸಂಘಟನಾ ಕಾರ್ಯದರ್ಶಿಯಾದ ಶ್ರೀ ಆರ್. ಕೊಟ್ಟಪ್ಪ, ಶ್ರೀ ವೆಂಕಟೇಶ್ ನಾಯ್ಕ್ ಶ್ರೀ ಬಿ ವಿ ಬಡಗೇರ್ ಶ್ರೀ ಬಸವರಾಜ್ ಶ್ರೀ ವಿನಯ್ ಶ್ರೀ ವೀರೇಶ್, ಶ್ರೀಮತಿ ವರದ, ಶ್ರೀಮತಿ ಕೊಟ್ರೇಶ್ವರಿ ಶ್ರೀಮತಿ ಕವಿತಾ ಶ್ರೀಮತಿ ಗೀತಾ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಸಂಘ ಬಳ್ಳಾರಿ ಜಿಲ್ಲೆ ಜಿಲ್ಲೆಯ 23 /1/25 ರಂದು ಸಂಕಲ್ಪ ದಿನ ಹಾಗೂ ನೇತಾಜಿ ಸುಭಾಷ್ ಚಂದ್ರ ಬೋಸ್ ಇವರ ಕಾರ್ಯಕ್ರಮವನ್ನು 3 ಸ್ಥಳಗಳಲ್ಲಿ ಆಚರಿಸಲಾಯಿತು ಈ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ಮುಖ್ಯ ಗುರುಗಳು ಹಾಗೂ ಶಿಕ್ಷಕರು ಸಂಸ್ಥೆಗಳ ಪದಾಧಿಕಾರಿಗಳು ನಮ್ಮ ಸಂಘದ ಶ್ರೀ ಗುಂಡಾಚಾರ್ ಶ್ರೀ ರಮೇಶ್ ಇವರು ಭಾಗವಹಿಸಿದ್ದರು

ಕರ್ನಾಟಕ ರಾಜ್ಯದ ಮಾಧ್ಯಮಿಕ ಶಿಕ್ಷಕ ಸಂಘ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಕರ್ತವ್ಯ ಬೋಧ ದಿವಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮದಲ್ಲಿ 38 ಶಿಕ್ಷಕರು ಭಾಗವಹಿಸಿದ್ದರು.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**
ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20



srushtidesigns@gmail.com